0205/2050/0624

**II Semester 3 Year LL.B./VI Semester 5 Year B.A., LL.B. (Maj.-Min. System)/B.A., LL.B./B.B.A., LL.B. Examination, Nov./Dec. 2020**

**FAMILY LAW – II (Mohd. Law and Indian Succession Law) (Old and New)**

Duration : 3 Hours Max. Marks : 100

**Instructions : 1. Answer Question No. 9 and any five of the remaining questions.**

**2. Q. No. 9 carries 20 marks and the remaining questions carry 16 marks each.**

**3. Answer should be written either in English or in Kannada completely.**

**ಸೂಚನೆಗಳು : 1. ಪ್ರಶ್ನೆ 9ಕ್ಕೆ ಮತ್ತು ಉಳಿದ ಪ್ರಶ್ನೆಗಳಲ್ಲಿ ಯಾವುದಾದರೂ ಐದಕ್ಕೆ ಉತ್ತರಿಸಿರಿ.**

**2. ಪ್ರಶ್ನೆ 9ಕ್ಕೆ 20 ಅಂಕಗಳು ಮತ್ತು ಉಳಿದ ಪ್ರತಿ ಪ್ರಶ್ನೆಗೆ 16 ಅಂಕಗಳು.**

**3. ಉತ್ತರವನ್ನು ಆಂಗ್ಲ ಅಥವಾ ಕನ್ನಡದಲ್ಲಿ ಸಂಪೂರ್ಣವಾಗಿ ಬರೆಯುವುದು.**

Q. No. 1. "Marriage according to Muslim law is not a sacrament but only a civil contract" critically examine. Marks : 16

''ಮಹಮದೀಯ ಕಾನೂನಿನಲ್ಲಿ ಮದುವೆಯು ಒಂದು ಧಾರ್ಮಿಕ ಕ್ರಿಯೆಯಲ್ಲ, ಆದರೆ ಒಂದು ನಾಗರಿಕ ಕರಾರು''. ವಿಮರ್ಶಾತ್ಮಕವಾಗಿ ಪರೀಕ್ಷಿಸಿರಿ.

Q. No. 2. Define "dower". Explain the kinds of dower. Marks : 16

''ಕನ್ಯಾಶುಲ್ಕ''ವನ್ನು ಪರಿಭಾಷಿಸಿರಿ. ಕನ್ಯಾಶುಲ್ಕದ ವಿವಿಧ ಪ್ರಕಾರಗಳನ್ನು ವಿವರಿಸಿರಿ.

Q. No. 3. Discuss the grounds for dissolution of marriage under Divorce Act. Marks : 16

ವಿಚ್ಛೇದನಾ ಕಾಯ್ದೆಯಡಿಯಲ್ಲಿ ವಿವಾಹ ವಿಘಟನೆಗೆ ಇರುವ ಆಧಾರಗಳನ್ನು ಚರ್ಚಿಸಿರಿ.

Q. No. 4. Explain the right of a Muslim wife to claim maintenance from her husband. Marks : 16

ಮುಸ್ಲಿಂ ಪತ್ನಿಯೊಬ್ಬಳು ತನ್ನ ಪತಿಯಿಂದ ಜೀವನಾಂಶವನ್ನು ಪಡೆಯುವ ಹಕ್ಕನ್ನು ವಿವರಿಸಿರಿ.

P.T.O.

Q. No. 5. Define "Hiba" or "Gift". Explain the essential requirements of a valid gift under Muslim law. Marks : 16

''ಹಿಬಾ'' ಅಥವಾ ''ದಾನ''ವನ್ನು ಪರಿಭಾಷಿಸಿ. ದಾನದ ಅಗತ್ಯಾಂಶಗಳನ್ನು ಮುಸ್ಲಿಂ ಕಾನೂನಿನಲ್ಲಿ ಪ್ರಣೀತವಾಗಿರುವಂತೆ ವಿವರಿಸಿರಿ.

Q. No. 6. Discuss the circumstances which renders a bequest void. Marks : 16

ಮರಣ ಶಾಸನ ದಾನವೊಂದು ಶೂನ್ಯಗೊಳ್ಳುವ ಸಂದರ್ಭಗಳನ್ನು ಚರ್ಚಿಸಿರಿ.

Q. No. 7. State the rules of succession applicable to a parsi dying into state. Marks : 16

ಮರಣ ಶಾಸನವನ್ನು ಮಾಡದೇ ಪಾರ್ಸಿ ವ್ಯಕ್ತಿಯೊಬ್ಬ ಮೃತನಾದಾಗ ಅನ್ವಯವಾಗುವ ಉತ್ತರಾಧಿಕಾರದ ನಿಯಮಗಳನ್ನು ನಿರೂಪಿಸಿರಿ.

Q. No. 8. Write short notes on **any two** : Marks : 8×2=16

ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

(a) Bequeathable third.

ಮರಣ ಶಾಸನ ದಾನಾರ್ಹ ಮೂರನೇ ಒಂದು ಭಾಗ.

(b) Acknowledgement of paternity.

ಪಿತೃತ್ವದ ಅಧಿಸ್ವೀಕೃತಿ.

(c) Unprivileged will.

ವಿಶೇಷಾಧಿಕಾರ ಇಲ್ಲದವರು ಮಾಡುವ ಮರಣ ಶಾಸನ.

Q. No. 9. Solve **any two** problems : Marks : 10×2=20

ಯಾವುದಾದರೂ **ಎರಡು** ಸಮಸ್ಯೆಗಳನ್ನು ಪರಿಹರಿಸಿ :

(a) Abdul appointed his brother Bashir as the guardian of his son Firoz, by his will. Abdul died when Firoz was 9 years old leaving 10 acres of land. After the death of Abdul, Fathima the mother of Firoz took the possession of this land and mortgaged it. Bashir questioned this transaction. Decide.

ಅಬ್ದುಲ್ ಎಂಬಾತನು ಉಯಿಲಿನ ಮೂಲಕ ತನ್ನ ತಮ್ಮನಾದ ಬಷೀರ್‌ನನ್ನು ತನ್ನ ಮಗನಾದ ಫಿರೋಜ್‌ನ ಪಾಲಕನೆಂದು ನೇಮಕ ಮಾಡುತ್ತಾನೆ. ಫಿರೋಜನು 9 ವರ್ಷ ಪ್ರಾಯದವನಿದ್ದಾಗ ಅಬ್ದುಲ್ ಮರಣಿಸುತ್ತಾನೆ. ಅಬ್ದುಲ್‌ನ ಮರಣಾನಂತರ ಆತನ 10 ಎಕ್ರೆ ಭೂಮಿಯನ್ನು ಫಿರೋಜ್‌ನ ತಾಯಿಯಾದ ಫಾತಿಮಾಳು ಕಬ್ಜೆಗೆ ತೆಗೆದುಕೊಂಡು ಅಡಮಾನ ಇಡುತ್ತಾಳೆ. ಈ ವ್ಯವಹರಣೆಯನ್ನು ಬಷೀರನು ಪ್ರಶ್ನಿಸುತ್ತಾನೆ. ನಿರ್ಧರಿಸಿರಿ.

(b) A Sunni woman dies leaving behind her husband, mother and two daughters. Distribute her property.

ಒಬ್ಬ ಸುನ್ನಿ ಮಹಿಳೆಯು ತನ್ನ ಗಂಡ, ತಾಯಿ ಹಾಗೂ ಇಬ್ಬರು ಪುತ್ರಿಯರನ್ನು ಬಿಟ್ಟು ಮರಣಿಸುತ್ತಾಳೆ. ಅವಳ ಆಸ್ತಿಯನ್ನು ಹಂಚಿರಿ.

(c) 'A' having domicile in India, dies in England, leaving behind immovable property in England, both movable and immovable properties in India. Decide the law of the country applicable for succession of his properties.

ಭಾರತದಲ್ಲಿ ಆದಿವಾಸ ಹೊಂದಿದ 'ಅ' ಎಂಬುವನು ಇಂಗ್ಲೆಂಡ್‌ನಲ್ಲಿ ಸ್ಥಿರಾಸ್ತಿ, ಭಾರತದಲ್ಲಿ ಚರ ಮತ್ತು ಸ್ಥಿರಾಸ್ತಿಗಳನ್ನು ಹೊಂದಿ ಇಂಗ್ಲೆಂಡ್‌ನಲ್ಲಿ ಮೃತನಾಗುತ್ತಾನೆ. ಯಾವ ದೇಶದ ಉತ್ತರಾಧಿಕಾರದ ಕಾನೂನು ಆ ಸ್ವತ್ತುಗಳಿಗೆ ಅನ್ವಯವಾಗುತ್ತದೆ ಎಂಬುದನ್ನು ನಿರ್ಧರಿಸಿರಿ.

---